**OS. No. 275/2015** **PW – 2**

ಪ್ರಮಾಣೀಕರಿಸಲಾದ ದಿನಾಂಕಃ **03.07.2026**

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. ಜಿ ಡಿ  ವಕೀಲರಿಂದಃ

ನಾನು ಬಿಎ ಪದವಿಧರನಾಗಿರುತ್ತೇನೆ. ದಾವಾ ಸ್ವತ್ತಿಗೆ ಸಂಬಂಧಪಟ್ಟ ದಾಖಲೆಗಳನ್ನು ನಾನು ನೋಡಿರುವುದಿಲ್ಲ. ದಾವಾ ಸ್ವತ್ತು ಯಾರ ಹೆಸರಿನಲ್ಲಿ ಇದೆ ಎಂಬುದು ನನಗೆ ಗೊತ್ತಿಲ್ಲ. ದಾಖಲೆ ನೋಡದ ಕಾರಣ ಖಾತೆ ನಂಬರ್ ಮತ್ತು ಅಳತೆಯು ದಾಖಲೆಯಲ್ಲಿ ಏನು ಇದೆ ಎಂದು ನನಗೆ ಗೊತ್ತಿಲ್ಲ ಎಂದರೆ ದಾಖಲೆ ನೋಡಿಲ್ಲ ಆದರೆ ಅಳತೆ ಗೊತ್ತಿಲ್ಲ ಖಾತೆ ನಂಬರ್ ಗೊತ್ತು ಎಂದು ನುಡಿದಿರುತ್ತಾರೆ.

ನನ್ನ ಮುಖ್ಯ ವಿಚಾರಣೆಯ ಚಕ್ಕುಬಂದಿಯಲ್ಲಿ ಪಶ್ಚಿಮಕ್ಕೆ ಬಸವಯ್ಯನವರು ಮನೆ ಎಂದು ಬರೆಸಿದ್ದು ಅವರು ಖಾತೆ ನಂಬರ್ ಗೊತ್ತಿಲ್ಲ. ಪೂರ್ವಕ್ಕೆ ಚಿಕ್ಕಣ್ಣರವರ  ಮನೆ ಎಂದು ಬರೆಸಿದ್ದು ಅವರು ಖಾತೆ ನಂಬರ್ ಗೊತ್ತಿಲ್ಲ. ಅವರ ಮನೆಯ ಅಳತೆ ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ದಾವಾ ಸ್ವತ್ತನ್ನು ಪುರಸಭೆಯವರು ಯಾವತ್ತಿಗೂ ಅಳತೆ ಮಾಡಿಲ್ಲ. ನಾನು ದಾವಾ ಸ್ವತ್ತನ್ನು ವಾದಿ ಮತ್ತು ಪ್ರತಿವಾದಿಯವರ ಸಮಕ್ಷಮ ಖುದ್ದಾಗಿ ಅಳತೆ ಮಾಡಿರುವುದಿಲ್ಲ. ದಾವಾ ಸ್ವತ್ತಿನ ಚಕ್ಕುಬಂದಿಗೆ ಸಂಬಂಧಪಟ್ಟಂತೆ ಮೂಲ ದಾಖಲೆಯನ್ನು ನೋಡಿರುವುದಿಲ್ಲ. ದಾವಾ ಸ್ವತ್ತಿನ ಖಾತೆ 1 ನೇ ವಾದಿಯವರ ಹೆಸರಿನಲ್ಲಿ ಇರುತ್ತದೆ. ಅದು ಇ-ಖಾತೆಯಾಗಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ದಾವಾ ಸ್ವತ್ತು ವಾದಿಯರಿಗೆ ಪಿತ್ರಾರ್ಜಿತವಾಗಿ ಬಂದಿರುತ್ತದೆ. ವಾದಿಯ ತಂದೆಯ ಹೆಸರು ಪುಟ್ಟಬಸವಯ್ಯ, ಅವರ ತಂದೆಯ ಹೆಸರು ನನಗೆ ಗೊತ್ತಿಲ್ಲ.

1 ನೇ ವಾದಿಯ ಪತ್ನಿ ಪುರಸಭೆಯ ಸದಸ್ಯರಾಗಿದ್ದರು ಎಂದರೆ ಸರಿ. ನಾನು ಹೇಳುವ ಶೆಡ್ಡನ್ನು ನಿರ್ಮಾಣ ಮಾಡಲು ಪುರಸಭೆಯಿಂದ ವಾದಿಯವರು ಅನುಮತಿ ಪಡೆದಿರುತ್ತಾರೋ ಇಲ್ಲವೋ ಗೊತ್ತಿಲ್ಲ. ಸದರಿ ಶೆಡ್ಡಿನ ಅಳತೆನನಗೆ ಗೊತ್ತಿಲ್ಲ. ನಿವೇಶ ಪೂರ್ತಿ ವಿಸ್ತೀರ್ಣದಲ್ಲಿ ಶೆಡ್ಡನ್ನು ನಿರ್ಮಾಣ ಮಾಡಿರುತ್ತಾರೆ. ನನ್ನ ಮುಖ್ಯ ವಿಚಾರ ಪ್ರಮಾಣ ಪತ್ರಕ್ಕೆ ನಾನೇ ಮಾಹಿತಿ ನೀಡಿ ಬರೆಸಿರುತ್ತೇನೆ  ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ನಿವೇಶನ ಖಾತೆ ನಂಬರಿಗೂ ಚಕ್ಕುಬಂದಿಗೂ ಸಂಬಂಧವಿಲ್ಲ ಎಂದರೆ ಸರಿಯಲ್ಲ.

1984 ರಲ್ಲಿ 1 ನೇ ಪ್ರತಿವಾದಿಗೆ ನಿವೇಶನ ಸಂಖ್ಯೆ -2 40*30 ವಿಸ್ತೀರ್ಣ ಗ್ರಾಮಠಾಣಾದಲ್ಲಿ ಮಂಜೂರಾತಿಯಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಚಾರ ನನಗೆ ಗೊತ್ತಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯವರು ದಾವಾ ಸ್ವತ್ತಿನಲ್ಲಿ ಯಾವುದೇ ಶೆಡ್ ಅನ್ನು ನಿರ್ಮಾಣ ಮಾಡಿಲ್ಲ , ಹಾಗೂ ದಾವಾ ಸ್ವತ್ತು ಅವರ ಸ್ವಾಧೀನದಲ್ಲಿಯೇ ಇಲ್ಲ , ಕೇವಲ ವಾದಿಯವರ ಮಾತು ಕೇಳಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚಿಸಿದೆ)

ಓ.ಹೇ.ಕೇ.ಸರಿ ಇದೆ

ಸಹಿ/-
ಪ್ರಧಾನ ಸಿವಿಲ್ ನ್ಯಾಯಾಧೀಶರು, ಚಿ.ನಾ.ಹಳ್ಳಿ